ಹೇಳಿಕೆಯೊಂದಿಗೆ ಸೇರಿಸಿ... ಆ ಕೊಲೆಗಾರ ನವೀನ್ ಇರಬಹುದೆಂದು ಹೇಳುತ್ತಿದ್ದಾರೆ ಅಷ್ಟೇ."

"ಮೈಲಾರ್ಡ್... ಸಾಕ್ಷಿಗಳಲ್ಲಿ ಗೊಂದಲ ಮೂಡಿಸಿ ಇಡೀ ಕೇಸನ್ನು ತಮಗೆ ಬೇಕಾದ ಹಾಗೆ ತಿರುಚಲು ನೋಡುತ್ತಿದ್ದಾರೆ" ಕೂಗಿದ ಪ್ರಾಸಿಕ್ಯೂಶನ್ ಲಾಯರ್. ಅವರಿಗೂ ತಿಳಿದಿತ್ತು ಶ್ರೀರಂಗಾಚಾರ್‌ಗೆ ಬೇಕಾಗಿದ್ದ ಆ ಪಾಯಿಂಟ್ ಸಿಕ್ಕಿತ್ತು. ಉಳಿದಿದ್ದು ಅವರ ಕ್ಲೋಸಿಂಗ್ ಆರ್ಗ್ಯುಮೆಂಟ್ ಮಾತ್ರ !

"ಮೈಲಾರ್ಡ್... ಇದೊಂದು ವಿಚಿತ್ರ ಕೇಸ್. ಇಲ್ಲೊಂದು ಕೊಲೆಯಾಗಿದೆ. ಆರೋಪಿ ಸ್ಥಾನದಲ್ಲಿ ನಿಂತಿರುವವನು ತನಗೂ ಆ ಮಹಿಳೆಗೂ ಸಂಬಂಧ ಇತ್ತು. ಆದರೆ ಅದೆಲ್ಲ ಮರೆತುಬಿಡಲು ಇಬ್ಬರೂ ಒಪ್ಪಿದ್ದರು ಎಂದಿದ್ದಾನೆ. ಇದನ್ನು ಅವರ ಮನೆಯಲ್ಲಿ ಸಿಕ್ಕ ಸಾಕ್ಷ್ಯಗಳು ಖಚಿತಪಡಿಸುತ್ತವೆ. ಮೃತಳು ಆರೋಪಿ ನವೀನ್ ಮನೆಯಿಂದ ಸುಮಾರು ಒಂಬತ್ತು ಗಂಟೆ ಮೂವತ್ತು ನಿಮಿಷಕ್ಕೆ ಹೊರಟಿದ್ದಾಳೆ. ಆ ಸಾಕ್ಷಿ ಲಭ್ಯವಾಗಿದ್ದರೂ ಅದನ್ನು ಮರೆಮಾಚಲಾಗಿದೆ. ಇದೆಲ್ಲವೂ ಆರೋಪಿ ನವೀನ್ ಅವರಿಗೆ ಅನುಪಮಾಳನ್ನು ಕೊಲೆ ಮಾಡುವ ಉದ್ದೇಶ ಇರಲಿಲ್ಲ ಅನ್ನುವುದನ್ನು ತೋರಿಸುತ್ತದೆ.

ಇನ್ನು ನವೀನ್ ಕೊಲೆ ಮಾಡಿದ್ದಾನೆ ಎಂಬುದಕ್ಕೆ ಪ್ರಾಸಿಕ್ಯೂಶನ್‌ನವರು ಮೂರು ಸಾಕ್ಷಿಗಳ ಹೇಳಿಕೆ ಕೊಟ್ಟಿದ್ದಾರೆ. ಮೂವರ ಹೇಳಿಕೆಗಳನ್ನೂ ಗಮನಿಸಿದರೆ... ರೂಪಾದೇವಿಯವರಿಗೆ... ಗಲಾಟೆ ಕೇಳಿದೆ ಆದರೆ ಚೀರಾಟ ಕೇಳಿಲ್ಲ... ದಿಲ್ ಬಾಗ್ ಸಿಂಗ್ ಅವರಿಗೆ ಚೀರಾಟ ಕೇಳಿದೆ. ಆದರೆ ಕೊಲೆ ಮಾಡಿದ್ದಾಗಲೀ ಅಥವಾ ಕೊಲೆಗಾರರನ್ನಾಗಲೀ ನೋಡಿಲ್ಲ. ಕೇವಲ ಯಾರೋ ನವೀನ್ ಮನೆಯೊಳಗೇ ಹೋದಹಾಗಾಯಿತು ಅಂದಿದ್ದಾರೆ. ನಶೆಯಲ್ಲಿ ಏನು ನೋಡಿದರೋ ಗೊತ್ತಿಲ್ಲ. ಇನ್ನು ಈ ಕೇಸ್‌ನ ಪ್ರತ್ಯಕ್ಷ ಸಾಕ್ಷಿ ರವಿಕಾಂತ್ ಅವರು ಯಾರೋ ಚಾಕು ಹಾಕಿದ್ದು ನೋಡಿದ್ದಾರೆ ಆದರೆ ಅದು ನವೀನ್ ಎಂದು ಖಚಿತವಾಗಿ ಹೇಳಲು ಆಗಿಲ್ಲ. ಅವರು ಸಂಶಯಾಸ್ಪದವಾಗಿ ಲೇಟ್ ಆಗಿ ಕೊಲೆಯಾದ ಸ್ಥಳಕ್ಕೆ ಬಂದಿದ್ದಾರೆ. ಅಲ್ಲಿ ದಿಲ್ ಬಾಗ್ ಸಿಂಗ್ ಅವರು ಹೇಳಿದ್ದು ಕೇಳಿ ಕೊಲೆ ಮಾಡಿದವನು ನವೀನ್ ಇರಬೇಕು ಎನ್ನುವ ನಿರ್ಧಾರಕ್ಕೆ ಬಂದಿದ್ದಾರೆ. ನವೀನ್‌ಗೆ ಕೊಲೆಯಾದವಳ ಜೊತೆ ಇದ್ದ ಸಂಬಂಧ, ಅದರಿಂದ ಬಿಡಿಸಿಕೊಳ್ಳಲು ಅವನು ಮಾಡಿದ ಪ್ರಯತ್ನ ಮತ್ತು ಈ ಮೂರೂ ಸಾಕ್ಷಿಗಳನ್ನು ಬಿಡಿಬಿಡಿಯಾಗಿ ನೋಡದೇ ಒಂದಕ್ಕೊಂದು ಜೋಡಿಸಿ ನೋಡಿದರೆ ನವೀನ್ ಕೊಲೆಮಾಡಿದ್ದಾನೆ ಅಂತ ಅನಿಸುತ್ತದೆ. ಇದೇ ಥಿಯರಿಯನ್ನು ಇಟ್ಟುಕೊಂಡು ಪೊಲೀಸರು ನವೀನ್ ಹಾಗೂ ಸುನಂದಾ ಅವರನ್ನು ಬಂಧಿಸಿ ಇಲ್ಲಿಗೆ ಕರೆತಂದಿದ್ದಾರೆ. ಇವರೆಲ್ಲರ ಹೇಳಿಕೆ ಪ್ರಕಾರ, ಸುಮಾರು ಹನ್ನೊಂದು ನಲವತ್ತೈದಕ್ಕೆ ಜಗಳ ಆಗಿದೆ, ಹನ್ನೆರಡರ ಹೊತ್ತಿಗೆ ಅನುಪಮಾಳಿಗೆ ಚಾಕು ಹಾಕಲಾಗಿದೆ. ಆದರೆ ಪೋಸ್ಟ್‌ಮಾರ್ಟಂ ರಿಪೋರ್ಟ್‌ನ್ನು ಸೂಕ್ಷ್ಮವಾಗಿ ನೋಡಿದರೆ, ಆ ಹುಡುಗಿ ವಿಪರೀತ ರಕ್ತಸ್ರಾವದಿಂದ ಸತ್ತಿದ್ದಾಳೆ ಅಂತ ಬರೆಯಲಾಗಿದೆ. ಅಷ್ಟು ರಕ್ತ ಹರಿಯಲು ಸುಮಾರು ಇಪ್ಪತ್ತು ನಿಮಿಷಗಳು ಬೇಕು. ನಾವು ದಿಲ್ ಬಾಗ್ ಸಿಂಗ್ ಮತ್ತು ರವಿಕಾಂತನ ಹೇಳಿಕೆಯನ್ನೇ ಗಮನಿಸಿದರೆ, ಆ ಹುಡುಗಿ ಮೂವತ್ತು ಸೆಕೆಂಡ್‌ನಲ್ಲಿ ಸತ್ತಿರಬೇಕು. ಯಾವುದೂ ತಾಳೆಯಾಗುತ್ತಿಲ್ಲ! ಪೊಲೀಸರಿಗೆ ನವೀನ್ ಮನೆಯಲ್ಲಿ ಮರ್ಡರ್ ವೆಪನ್ ಸಿಕ್ಕಿಲ್ಲ. ಕೇವಲ ಒಂದೆರಡು ನಿಮಿಷದಲ್ಲಿ ಅದು ಹೇಗೆ ರಕ್ತದಿಂದ ತೊಯ್ದ ಚಾಕುವನ್ನು ಮುಚ್ಚಿಡಲಾಗುತ್ತದೆ."

"ಅವರಿಗೆ ಸುಳ್ಳು ಹೇಳುವ ಅವಶ್ಯಕತೆಯಾದರೂ ಏನು?" ಕಡೆಯ ಪ್ರಯತ್ನವೆಂಬಂತೆ ಕೇಳಿದ ಪಬ್ಲಿಕ್ ಪ್ರಾಸಿಕ್ಯೂಟರ್.

"ಅವರು ಸುಳ್ಳು ಹೇಳುತ್ತಿದ್ದಾರೆ ಎಂದು ಖಡಾಖಂಡಿತವಾಗಿ ಹೇಳುತ್ತಿಲ್ಲ. ಆದರೆ ಇವರೆಲ್ಲ ಆ ಕೊಲೆ ನವೀನ್ ಮಾಡಿದ್ದಾನೆ ಎಂದು ಬೆಟ್ಟು ಮಾಡಿ ತೋರುತ್ತಿದ್ದಾರೆ. ನಾನು ಅವರು ಕೊಲೆ ಮಾಡಿಲ್ಲ ಅಂತ ಹೇಳುತ್ತಿದ್ದೇನೆ ಅಷ್ಟೇ... ಕೊಲೆ ನಡೆದೇ ಇಲ್ಲ ಅಂತ ಹೇಳುತ್ತಿಲ್ಲ. ನವೀನ್ ಕೊಲೆ